**ಸಿಡ್ನಿ ಶ್ರೀನಿವಾಸ್**

ಕಲೆ: ಭಾವು ಪತ್ತಾರ್

# ಮರೀಚಿಕೆಯ ನಿರ್ಮಾತೃ ಬೀರೀಯನ್

ಹಲ್ಲಿ ಬೀರೀಯುನ್ನನಿಗೆ (ಬೂದು ಬಣ್ಣದ ಚಿಕ್ಕ ಹಲ್ಲಿ) ಹಸಿರು ಗಿಣಿಗಳಾದ ಬುಲ್ಲೈ ಬುಲ್ಲೈ ಸಹೋದರಿಯರನ್ನು ಮದುವೆಯಾಗುವಾಸೆ. ಆದರೆ, ಅವರಿಗೆ ಅವನನ್ನು ವರಿಸುವುದು ಸ್ವಲ್ಪವೂ ಇಷ್ಟವಿರಲಿಲ್ಲ. ಅವರು ಬಯಸಿದ್ದು ವೀಡಾ ಎಂಬ ಅಣಕುಹಕ್ಕಿಯನ್ನು. ಅವರ ತಾಯಿ ಇದಕ್ಕೆ ಒಪ್ಪಿಗೆ ನೀಡಲಿಲ್ಲ. ಕಾರಣ, ಅವರಿಬ್ಬರೂ ಹುಟ್ಟಿದಾಗ ಅವಳು ಬಿರೀಯನನ್ನಿಗೆ ಮಾತು ಕೊಟ್ಟಿದ್ದಳು – "ನನ್ನ ಈ ಹೆಣ್ಣುಮಕ್ಕಳನ್ನು ನಿನಗೇ ಕೊಡುತ್ತೇನೆ." ಬೀರೀಯನ್ ಮಹಾ ಮಾಂತ್ರಿಕ ಬೇರೆ. ಕೊಟ್ಟ ಮಾತನ್ನು ಮೀರಿದ್ದೇ ಆದರೆ ಅವನಿಂದ ಅಪಾಯ ತಪ್ಪಿದ್ದಲ್ಲ.

ವೀಡಾ ತನ್ನ ಬೇಟೆಯನ್ನು ಮುಗಿಸಿ ಹಿಂತಿರುಗಿದಾಗ ಸೋದರಿಯರು ಅವನನ್ನು ಕಂಡು ತಮ್ಮ ದುಃಖವನ್ನು ತೋಡಿಕೊಂಡರು. "ತಾಯಿ ಮಾತು ಕೊಟ್ಟಿದ್ದಾಳೆ. ಮೀರುವಂತಿಲ್ಲ. ಬೀರೀಯನ್ ಆಗಲೇ ನಮ್ಮನ್ನು ಕರೆದೊಯ್ಯಲು ಬಂದಿದ್ದಾನೆ. ಈಗ ಅವನೊಡನೆ ಹೋಗದೇ ವಿಧಿಯಿಲ್ಲ."

ವೀಡಾ ಹೇಳಿದ, "ಚಿಂತಿಸಬೇಡಿ. ನಾಳೆ ಮುದುಕ ಬೀರೀಯನ್ ಸ್ಪ್ರಿಂಗ್ಸ್ ಪ್ರದೇಶದಿಂದ ಬರುವ ಜನರನ್ನು ನೋಡಹೋಗುತ್ತಾನೆ. ಅವನು ಅಲ್ಲಿದ್ದಾಗ ನಾವು ದೊಡ್ಡ ನದಿಯತ್ತ ಪಲಾಯನ ಮಾಡೋಣ. ನಾವು ಹೋಗುತ್ತಿದ್ದಂತೆ ನಮ್ಮ ಹಿಂದಿರುವ ಹಾದಿಯನ್ನು ಸುಡುತ್ತಾ ಹೋದರೆ ಸರಿ. ಆಗ ಯಾರೂ ನಮ್ಮ ಹಾದಿಯನ್ನು ಹಿಡಿದು ನಮ್ಮನ್ನು ಹಿಂಬಾಲಿಸುವುದಿಲ್ಲ. ನಾನು ಎಂದಿನಂತೆ ಬೇಟೆಗೆ ಹೋಗುವ ನೆಪದಲ್ಲಿ ಹೊರಟು ದಟ್ಟ ಗಿಡ್ಯಾ (ಚಳಿಗಾಲದಲ್ಲಿ ಕೆಟ್ಟವಾಸನೆ ನೀಡುವ ಒಂದು

